ದಿನಾಂಕಃ 22.07.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಪಾಟೀಸವಾಲುಃ ಶ್ರೀ.ಹೆಚ್‌ಜಿಎಸ್ ವಕೀಲರಿಂದ ಪ್ರತಿವಾದಿ ಪರವಾಗಿಃ

ನಾವು ಈಗ ವಾಸವಾಗಿರುವ ವಿಳಾಸ ನಂ.11, ಜಿಎಫ್-1, ನೀಲಾದ್ರಿ ಮಾನ್ಸ್‌ಷನ್, 6ನೇ ಅಡ್ಡರಸ್ತೆ, 4ನೇ ಮುಖ್ಯರಸ್ತೆ, ವಿವೇಕನಂದನಗರ, ಬನಶಂಕರಿ ಮೂರನೇ ಹಂತ ಬೆಂಗಳೂರು ಆಗಿರುತ್ತದೆ. ಏನು ವ್ಯವಹಾರ ಮಾಡುತ್ತಿದ್ದೀರಿ ಎಂದರೆ ಬಟ್ಟೆ ವ್ಯಾಪಾರವನ್ನು ಮಾಡುತ್ತಿದ್ದೆನು. ನಮ್ಮ ಬಟ್ಟೆ ಅಂಗಡಿಯ ಹೆಸರು ಓಂಕಾರ್ ಸಿಲ್ಕ್ ಹೌಸ್ ಆಗಿರುತ್ತದೆ. ಓಂಕಾರ್ ಸೀಲ್ಕ್ ಹೌಸ್ ಚಿಕ್ಕಪೇಟೆಯಲ್ಲಿ ಇದ್ದು ಅದರ ನಂಬರು.164 ಆಗಿರುತ್ತದೆ. ಸದರಿ ಬಟ್ಟೆ ಅಂಗಡಿಯಲ್ಲಿ ನಾನು ಒಬ್ಬ ಪಾಲುದಾರನಾಗಿರುತ್ತೇನೆ. ಮತ್ತೇ ಯಾರು ಯಾರು ಪಾಲುದಾರರು ಇರುತ್ತಾರೆ ಎಂದರೆ ನಮ್ಮ ಅಣ್ಣ ಸುಧಾಕರ್ ಎನ್ನುವವರು ಪಾಲುದಾರರು ಆಗಿರುತ್ತಾರೆ. ಎಷ್ಟು ವರ್ಷಗಳಿಂದ ಆ ವ್ಯವಹಾರವನ್ನು ಮಾಡುತ್ತಿದ್ದೀರಿ ಎಂದರೆ ನಮ್ಮ ತಂದೆಯವರ ಕಾಲದಿಂದ ಅಂದರೆ 1957ರಿಂದ ಮಾಡುತ್ತಿದ್ದೇವೆ. ಮೊದಲು ನಮ್ಮ ತಂದೆಯವರು ನಡೆಸುತ್ತಿದ್ದರು ಆ ನಂತರದಲ್ಲಿ ನಾವು ಪಾಲುದಾರರಾಗಿ ವ್ಯವಹಾರ ನಡೆಸುತ್ತಿದ್ದೇವೆ. ಯಾವಾಗ ಪಾಲುದಾರರಾಗಿರುತ್ತೀರಿ ಎಂದರೆ 1980ರಿಂದ ನಾನು ಪಾಲುದಾರನಾಗಿರುತ್ತೇನೆ. ನಂ.164ರ ಸ್ವತ್ತು ಯಾರ ಹೆಸರಿನಲ್ಲಿ ಇರುತ್ತದೆ ಎಂದರೆ ಮೊದಲು ನಮ್ಮ ತಂದೆಯವರ ಹೆಸರಿನಲ್ಲಿ ಇತ್ತು ಈಗ ನಮ್ಮ ಅತ್ತಿಗೆಯ ಹೆಸರಿನಲ್ಲಿ ಇರುತ್ತದೆ. ನಮ್ಮ ಬಟ್ಟೆ ಅಂಗಡಿ ಇರುವ ಸ್ವತ್ತಿನ ಅಳತೆಯು ಪೂರ್ವ-ಪಶ್ಚಿಮ 24 ಅಡಿ ಮತ್ತು ಉತ್ತರ-ದಕ್ಷಿಣ 19 ಅಡಿ ಇರುತ್ತದೆ. ಆ ಸ್ವತ್ತಿನ ಮಾಲೀಕರು ನಮ್ಮ ತಂದೆಯವರು ಆಗಿದ್ದರು ಎನ್ನುವ ಕುರಿತಂತೆ ನನ್ನ ಹತ್ತಿರ ದಾಖಲೆ ಇರುತ್ತದೆ. ಏನು ದಾಖಲೆ ಎಂದರೆ ಕ್ರಯಪತ್ರ ಇರುತ್ತದೆ. ಕ್ರಯಪತ್ರವನ್ನು ಹಾಜರುಪಡಿಸಲು ನಮಗೆ ತೊಂದರೆ ಇರುವುದಿಲ್ಲ.

2. ನಮ್ಮ ತಂದೆಯವರು ಕುಟುಂಬದ ಆಸ್ತಿಗಳ ಕುರಿತಂತೆ ಅವರು ಮೃತರಾಗುವುದಕ್ಕಿಂತ ಮೊದಲು ವಿಭಾಗ ಪತ್ರವನ್ನು ಮಾಡಿಸಿರುತ್ತಾರೆ. ಯಾವ ಇಸವಿ ಎನ್ನುವುದು ನನಗೆ ನೆನಪಿರುವುದಿಲ್ಲ. ವಿಭಾಗ ಪತ್ರ ಮಾಡಿಸಿ ಸುಮಾರು 10-12 ವರ್ಷಗಳು ಆಗಿರಬಹುದು. ನಮ್ಮ

ಬಟ್ಟೆ ಅಂಗಡಿ ಇರುವ ಕಟ್ಟಡದಲ್ಲಿ ನೆಲ ಅಂತಸ್ತು ಮತ್ತು ಒಂದನೇ ಅಂತಸ್ತು ಇರುತ್ತದೆ. ಒಂದನೇ ಅಂತಸ್ತಿನ ಅಳತೆಯು ಸಹ 24 X 19 ಆಗಿದ್ದು, ಅದರ ನಂಬರು.164 ಆಗಿರುತ್ತದೆ. ನಮ್ಮ ಅತ್ತಿಗೆಯ ಹೆಸರು ಭಾಗ್ಯ ಆಗಿರುತ್ತದೆ. ನಾವು ನಡೆಸುತ್ತಿದ್ದ ಅಂಗಡಿಯ ಮಳಿಗೆಗೆ ನಮ್ಮ ಅತ್ತಿಗೆ ಭಾಗ್ಯ ಇವರಿಗೆ ಬಾಡಿಗೆ ಕೊಡುತ್ತಿಲ್ಲ. ಒಂದನೇ ಅಂತಸ್ತಿನಲ್ಲಿರುವ ಅಂಗಡಿಯ ಮಳಿಗೆಯ ಜಾಗವನ್ನು 1957ರಲ್ಲಿ ನಮ್ಮ ತಂದೆಯವರು ಯಾರಿಗೆ ಬಾಡಿಗೆಗೆ ಕೊಟ್ಟಿದ್ದರು ಎಂದರೆ ರಾಜೀವ್ ಇವರ ತಂದೆಗೆ ಮನ್ಮಂದಿರ್ ಪ್ಯಾಷನ್ಸ್ ಅಂಗಡಿ ನಡೆಸಲು ಬಾಡಿಗೆಗೆ ಕೊಟ್ಟಿದ್ದರು. ರಾಜೀವ್ ಇವರ ತಂದೆಯ ಹೆಸರು ಅಮೃತ್‌ಲಾಲ್ ಆಗಿದ್ದು ಅವರಿಗೆ ಬಾಡಿಗೆಗೆ ಕೊಟ್ಟಿರುತ್ತಾರೆ. ಸಾಕ್ಷಿ ಸ್ವತಃ ಅವರು ನಡೆಸುವಾಗ ಅಂಗಡಿಯ ಹೆಸರು ಮಹಾರಾಜ ಪ್ಯಾಷನ್ಸ್ ಎಂದು ಇತ್ತು ಎಂದು ನುಡಿದಿರುತ್ತಾರೆ. ನಮ್ಮ ತಂದೆಯವರು ಅಮೃತ್‌ಲಾಲ್ ಇವರಿಗೆ ಬಾಡಿಗೆಗೆ ಕೊಡುವಾಗ ಎಷ್ಟು ಮುಂಗಡ ಹಣ ಪಡೆದುಕೊಂಡಿದ್ದರು ಎನ್ನುವುದು ನನಗೆ ಗೊತ್ತಿರುವುದಿಲ್ಲ. ಅಮೃತ್‌ಲಾಲ್ ಇವರು ಬಾಡಿಗೆಗೆ ಇದ್ದರು ಮತ್ತು ಅವರು ಮಹಾರಾಜ ಪ್ಯಾಷನ್ಸ್ ಎನ್ನುವ ಅಂಗಡಿಯನ್ನು ನಡೆಸುತ್ತಿದ್ದರು ಎನ್ನುವ ಕುರಿತಂತೆ ನಾನು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

3. ನಮ್ಮ ಅಂಗಡಿಯ ಮೇಲೆ ಇರುವ ಒಂದನೇ ಅಂತಸ್ತಿಗೆ ಹೋಗಲು ಚಿಕ್ಕಪೇಟೆ ಮುಖ್ಯರಸ್ತೆಗೆ ಹೊಂದಿಕೊಂಡಂತೆ ಮುಂಭಾಗದಲ್ಲಿ ಮೆಟ್ಟಿಲುಗಳು ಇರುವುದಿಲ್ಲ. ಒಂದನೇ ಮಹಡಿಗೆ ಹೋಗಲು ಕಟ್ಟಡದ ಹಿಂಬದಿಯ ರಸ್ತೆಯ ಕಡೆ ಇರುವ ಮೆಟ್ಟಿಲುಗಳ ಮೂಲಕ ಹೋಗಬೇಕಾಗುತ್ತದೆ ಎಂದರೆ ಸರಿ. ನಮ್ಮ ತಂದೆಯ ಹೆಸರಿಗೆ ಮುನಿಸಿಪಲ್ ಖಾತಾ ನಂಬರು.164 ಇರುತ್ತದೆ ಎಂದರೆ ಸರಿ. ನಮ್ಮ ತಂದೆಯವರು ಖರೀದಿ ಮಾಡಿದ್ದು ನಂ.164 ಆಗಿದ್ದು ಅದು ಒಂದು ಭಾಗವಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಸ್ವತಃ ಇನ್ನೊಂದು ಭಾಗವಾಗ ನಂ.164ಃ1ನ್ನು ನಮ್ಮ ಅತ್ತಿಗೆಯವರು ಬೇರೆಯವರ ಕಡೆಯಿಂದ ಖರೀದಿ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ನಮ್ಮ ಅತ್ತಿಗೆಯವರು ಯಾವಾಗ ಖರೀದಿ ಮಾಡಿರುತ್ತಾರೆ ಎಂದರೆ ದಿನಾಂಕ ನೆನಪಿರುವುದಿಲ್ಲ ಸುಮಾರು 20-25 ವರ್ಷಗಳ ಹಿಂದೆ ಖರೀದಿ ಮಾಡಿರುತ್ತಾರೆ. ನಮ್ಮ ಅಂಗಡಿ ಮಳಿಗೆಯ ಹಿಂಭಾಗದಲ್ಲಿ ಇರುವ ಅಂಗಡಿಯ

ಅಳತೆಯು ಎಷ್ಟು ಇರುತ್ತದೆ ಎಂದರೆ 24 X 10 ಆಗಿರುತ್ತದೆ. ನಮ್ಮ ಅಂಗಡಿಯ ಮಳಿಗೆಯ ಹಿಂಭಾಗದ ರಸ್ತೆಯ ಹೆಸರು ದಿವಾನ್ ಸೂರಪ್ಪ ಲೇನ್ ಆಗಿರುತ್ತದೆ ಎಂದರೆ ಸರಿ. ನಮ್ಮ ಅಂಗಡಿಯ ಹಿಂಭಾಗದಲ್ಲಿ ಇರುವ ಮಳಿಗೆಯನ್ನು ಮಹಾರಾಜ ಪ್ಯಾಷನ್ಸ್ ಇವರಿಗೆ ಬಾಡಿಗೆಗೆ ಕೊಡಲಾಗಿತ್ತು. ನಮ್ಮ ಅಂಗಡಿ ಇರುವ ಕಟ್ಟಡದ ಒಂದನೇ ಅಂತಸ್ತಿಗೆ ಹೋಗಬೇಕಾದರೆ ಹಿಂಭಾಗದ ನೆಲಅಂತಸ್ತಿನಲ್ಲಿರುವ ಮಳಿಗೆಯಲ್ಲಿ ಇರುವ ಮೆಟ್ಟಿಲುಗಳ ಮುಖಾಂತರ ಹೋಗಬೇಕಾಗುತ್ತದೆ ಎಂದರೆ ಸರಿ. ನಮ್ಮ ಅಂಗಡಿ ಮಳಿಗೆಯ ಹಿಂಭಾಗದಲ್ಲಿರುವ ಮಳಿಗೆಯನ್ನು ಮತ್ತು ಒಂದನೇ ಅಂತಸ್ತಿನಲ್ಲಿರುವ ಮಳಿಗೆಯನ್ನು ಒಟ್ಟಿಗೆ ಬಾಡಿಗೆಗೆ ಕೊಡಲಾಗಿರುತ್ತದೆ. ನಮ್ಮ ಅಂಗಡಿಯ ಹಿಂಬದಿ ಇರುವ ಮಳಿಗೆಯನ್ನು ಮತ್ತು ಒಂದನೇ ಅಂತಸ್ತಿನಲ್ಲಿರುವ ಮಳಿಗೆಯನ್ನು ಅಮೃತ್‌ಲಾಲ್ ಇವರಿಗೆ ಮಹಾರಾಜ ಪ್ಯಾಷನ್ಸ್ ಅಂಗಡಿ ನಡೆಸಲು ನಮ್ಮ ತಂದೆಯವರು ಬಾಡಿಗೆಗೆ ಕೊಟ್ಟಿರುತ್ತಾರೆ ಎನ್ನುವ ಕುರಿತಂತೆ ದಾಖಲೆಗಳು ಇರುತ್ತವೆಯೇ ಎಂದರೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಸ್ವತಃ ಚೆಕ್ಕುಗಳನ್ನು ಕೊಡುತ್ತಿದ್ದರು ಎಂದು ನುಡಿದಿರುತ್ತಾರೆ. ಅಮೃತ್‌ಲಾಲ್ ಇವರು ನಮ್ಮ ತಂದೆಯವರಿಗೆ ಎಷ್ಟು ರೂಪಾಯಿಗಳ ಚೆಕ್ಕನ್ನು ಕೊಡುತ್ತಿದ್ದರು ಎಂದರೆ ರೂ.6,000-00ಗಳಿಗೆ ಚೆಕ್ಕನ್ನು ಕೊಡುತ್ತಿರಬಹುದು ಸರಿಯಾಗಿ ನನಗೆ ತಿಳಿದಿರುವುದಿಲ್ಲ. ಆ ಕುರಿತಂತೆ ದಾಖಲೆಗಳನ್ನು ಹಾಜರುಪಡಿಸುತ್ತೀರಾ ಎಂದರೆ ಮನೆಯಲ್ಲಿ ನೋಡಬೇಕು ಸಿಕ್ಕರೆ ಹಾಜರುಪಡಿಸುತ್ತೇನೆ. ಅಮೃತ್‌ಲಾಲ್ ಇವರಿಗಿಂತ ಮೊದಲು ಅಂಗಡಿ ಮಳಿಗೆಯಲ್ಲಿ ಯಾರು ಬಾಡಿಗೆಗೆ ಇದ್ದರು ಎನ್ನುವುದು ನನಗೆ ಗೊತ್ತಿರುವುದಿಲ್ಲ.

4. 1986ರಲ್ಲಿ ಅಂಗಡಿ ವ್ಯವಹಾರವನ್ನು ನಮ್ಮ ಅಣ್ಣ ಸುಧಾರಕ್ ಇವರು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನಮ್ಮ ಅಣ್ಣ ಸುಧಾಕರ್ ಇವರು ಅಂಗಡಿ ಬಾಡಿಗೆ ಹಣವನ್ನು ಹಾಗೂ ಮುಂಗಡ ಹಣವನ್ನು ಅವರೇ ಪಡೆದುಕೊಳ್ಳುತ್ತಿದ್ದರು ಎಂದರೆ ಸರಿ. ನಮ್ಮ ಅಣ್ಣ ಸುಧಾಕರ್ ಇವರು ಹಿಂದೆ ಇದ್ದಂತಹ ಬಾಡಿಗೆದಾರರ ವಿರುದ್ದ ಹೆಚ್‌ಅರ್‌ಸಿ ಪ್ರಕರಣ ದಾಖಲು ಮಾಡಿದ್ದರು ಎಂದರೆ ಸರಿಯಲ್ಲ. ಹೆಚ್‌ಆರ್‌ಸಿ ಪ್ರಕರಣ ವಿಚಾರಣೆಗೆ ಬಾಕಿ ಇದ್ದಾಗ ನಮ್ಮ ಅಣ್ಣ ಸುಧಾಕರ್ ಇವರು ಸೋಹನ್

ಲಾಲ್ ಬಿನ್ ಚಂದನ್‌ಮಲ್ ಮತ್ತು ಅಮೃತ್‌ಲಾಲ್ ಬನ್ಸಾಲಿ ಇವರ ಕಡೆಯಿಂದ ಹಿಂದಿನ ಬಾಡಿಗೆದಾರರಿಗೆ ಮುಂಗಡ ಹಣವಾದ ರೂ.5,50,000-00 ಗಳನ್ನು ಕೊಡಬೇಕು ಮತ್ತು ನಮಗೆ ಗುಡ್‌ವಿಲ್ ಆಗಿ ರೂ.5,50,000-00ಗಳನ್ನು ಕೊಡಬೇಕು ಎಂದು ಹೇಳಿ ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ನಮ್ಮ ಅಂಗಡಿ ಮಳಿಗೆಯ ಮುಂಭಾಗದ ಮಳಿಗೆ ಮತ್ತು ಒಂದನೇ ಅಂತಸ್ತಿನಲ್ಲಿರುವ ಮಳಿಗೆಯನ್ನು 1986ರಲ್ಲಿ ಸೋಹನ್‌ಲಾಲ್ ಮತ್ತು ಅಮೃತ್‌ಲಾಲ್ ಇವರಿಗೆ ತಿಂಗಳಿಗೆ ರೂ.1,500-00 ಗಳಂತೆ ಬಾಡಿಗೆಗೆ ಕೊಡಲಾಗಿತ್ತು ಎಂದರೆ ಬಾಡಿಗೆ ಕೊಟ್ಟಿರುವುದು ಸರಿ ಆದರೆ ಎಷ್ಟು ಹಣ ಬಾಡಿಗೆಗೆ ಕೊಡಲಾಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ನಮ್ಮ ಅಣ್ಣನವರು ಸೋಹನ್‌ಲಾಲ್ ಮತ್ತು ಅಮೃತ್‌ಲಾಲ್ ಇವರ ಕಡೆಯಿಂದ ತಲಾ ರೂ.50,000-00ಗಳಂತೆ ಒಟ್ಟು ಒಂದು ಲಕ್ಷ ರೂಪಾಯಿಗಳನ್ನು ಮುಂಗಡವಾಗಿ ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ.

5. ನಮ್ಮ ಅಂಗಡಿ ಇರುವಂತಹ ಕಟ್ಟಡವು ನೂರು ವರ್ಷಗಳಿಗಿಂತ ಹಳೆಯ ಕಟ್ಟಡ ಆಗಿರುತ್ತದೆ ಎಂದರೆ ಇರಬಹುದು. ಸೋಹನ್‌ಲಾಲ್ ಮತ್ತು ಅಮೃತ್‌ಲಾಲ್ ಇವರು ಆ ಮಳಿಗೆಯನ್ನು ಬಾಡಿಗೆಗೆ ಪಡೆದುಕೊಂಡ ನಂತರ ಅದರ ರಿಪೇರಿಗಾಗಿ ರೂ.5,25,000-00ಗಳನ್ನು ಖರ್ಚು ಮಾಡಿರುತ್ತಾರೆ ಎಂದು ನಮ್ಮ ಅಣ್ಣನವರು ಬರೆದಿಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಮ್ಮ ಅಣ್ಣನವರು ಬಾಡಿಗೆಗೆ ಕೊಟ್ಟಾಗ ಸೋಹನ್‌ಲಾಲ್ ಮತ್ತು ಅಮೃತ್‌ಲಾಲ್ ಇವರು ವಿನೋದ್ ಅಂಡ್ ಕಂಪನಿ ಎನ್ನುವ ಹೆಸರಿನಲ್ಲಿ ವ್ಯವಹಾರ ನಡೆಸುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ.

ವಿನಂತಿಯ ಮೇರೆಗೆ ಮುಂದುವರೆದ ಪಾಟೀಸವಾಲನ್ನು ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

15ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ